## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, ಡಾ|| ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಗಳು ಮತ್ತು ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳಲ್ಲಿನ 6ನೇ ತರಗತಿ ಪ್ರವೇಶಕ್ಕೆ ಪರಿಷ್ಕೃತ ಮಾರ್ಗಸೂಚಿಗಳನ್ನು ಹೊರಡಿಸುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: MWD 69 MDS 2025, ದಿನಾಂಕ:31.01.2025.
2. ಸರ್ಕಾರದ ಆದೇಶ ಸಂಖ್ಯೆ: ಸಕಇ 8 ಎಸ್‌ಎಲ್‌ಪಿ 2024, ದಿನಾಂಕ:25.08.2025.
3. ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಇವರ ಇ-ಕಛೇರಿ ಕಡತ ಸಂಖ್ಯೆ: DOM/DEVP/MDRS/32/2025.

******

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರ.ಸಂ (01)ರಲ್ಲಿನ ಸರ್ಕಾರದ ಆದೇಶದಲ್ಲಿ ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, ಡಾ|| ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಗಳು ಮತ್ತು ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳಲ್ಲಿ 6ನೇ ತರಗತಿಗೆ ಲಭ್ಯವಾಗುವ ಸೀಟುಗಳಿಗೆ ಅನುಗುಣವಾಗಿ ಪ್ರವೇಶ ಕಲ್ಪಿಸಲು ನಿಬಂಧನೆ ಮತ್ತು ಷರತ್ತು ಹಾಗೂ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

ಮೇಲೆ ಓದಲಾದ ಕ್ರ.ಸಂ(2)ರ ಸರ್ಕಾರದ ಆದೇಶದಲ್ಲಿ ಗೌರವಾನ್ವಿತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ಆಯೋಗದ ವರದಿಯನ್ನು ಅಗತ್ಯ ಮಾರ್ಪಾಡುಗಳೊಂದಿಗೆ ಅಂಗೀಕರಿಸಿ, ಪರಿಶಿಷ್ಟ ಜಾತಿಯಲ್ಲಿರುವ 101 ಜಾತಿಗಳನ್ನು 5 ಪ್ರವರ್ಗಗಳ ಬದಲಾಗಿ ಪ್ರವರ್ಗ-ಎ, ಪ್ರವರ್ಗ-ಬಿ ಮತ್ತು ಪ್ರವರ್ಗ-ಸಿ ಎಂದು 3 ಪ್ರವರ್ಗಗಳಾಗಿ ವರ್ಗೀಕರಿಸಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಪರಿಶಿಷ್ಟ ಜಾತಿಗಳಿಗೆ ಮೀಸಲಿರಿಸಿರುವ ಶೇ.17 % ಮೀಸಲಾತಿಯನ್ನು ಪ್ರವರ್ಗ-ಎ ರಲ್ಲಿನ ಸಮುದಾಯಗಳಿಗೆ ಶೇ.6%, ಪ್ರವರ್ಗ-ಬಿರಲ್ಲಿನ ಸಮುದಾಯಗಳಿಗೆ ಶೇ.6% ಮತ್ತು ಪ್ರವರ್ಗ-ಸಿರಲ್ಲಿನ ಸಮುದಾಯಗಳಿಗೆ ಶೇ.5% ರಷ್ಟು ನಿಗಧಿಪಡಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಲಾಗಿರುತ್ತದೆ.

ಅದರಂತೆ, ಮೇಲೆ ಓದಲಾದ ಕ್ರ.ಸಂ (3)ರಲ್ಲಿ ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, ಡಾ|| ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಗಳು ಮತ್ತು ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳ 6ನೇ ತರಗತಿಯ ಪ್ರವೇಶಾತಿಯಲ್ಲಿ ಪರಿಶಿಷ್ಟ ಜಾತಿಗೆ ಒದಗಿಸಲಾಗಿರುವ ಮೀಸಲಾತಿ ಮಿತಿಯಲ್ಲಿ ಸದರಿ ಮಾನದಂಡವನ್ನು ಅನುಸರಿಸಿ ಅನುಷ್ಠಾನಗೊಳಿಸಲು ಹಾಗೂ ದಾಖಲಾತಿ ಪ್ರಕ್ರಿಯೆಯಲ್ಲಿ ಕೈಗೊಳ್ಳಬೇಕಾದ ಪರಿಷ್ಕೃತ ಮಾರ್ಗಸೂಚಿಗಳೊಂದಿಗೆ ಸರ್ಕಾರಿ ಆದೇಶ ಹೊರಡಿಸುವಂತೆ ಕೋರಿ ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಇವರು ಏಕಕಡತದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

..2

Scanned with OKEN Scanner
Scanned with OKEN Scanner

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ,

**ಸರ್ಕಾರದ ಆದೇಶಸಂಖ್ಯೆ: MWD-MDS/833/2025,**
**ಬೆಂಗಳೂರು, ದಿನಾಂಕ:31.12.2025.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, ಡಾ|| ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಗಳು ಮತ್ತು ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳ 6ನೇ ತರಗತಿಯ ಪ್ರವೇಶಾತಿಗಾಗಿ ಗೌರವಾನ್ವಿತ ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ಆಯೋಗದ ವರದಿಯನ್ವಯ ಮೀಸಲಾತಿಯನ್ನು ನಿಗದಿಪಡಿಸಿ, ಅನುಷ್ಠಾನಗೊಳಿಸಲು ಹಾಗೂ ಇತರೆ ದಾಖಲಾತಿ ಪ್ರಕ್ರಿಯೆಗಳ ಸಮಗ್ರ ಮತ್ತು ಪರಿಷ್ಕೃತ ಮಾರ್ಗಸೂಚಿಗಳೊಂದಿಗೆ 2026-27ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ದಾಖಲಾತಿ ಪ್ರಕ್ರಿಯೆಗಳನ್ನು ಕೈಗೊಳ್ಳಲು ಈ ಕೆಳಕಂಡ ಮಾರ್ಗಸೂಚಿಗಳೊಂದಿಗೆ ಸರ್ಕಾರದ ಅನುಮೋದನೆ ನೀಡಿ ಆದೇಶಿಸಿದೆ.

1. **ಪ್ರವೇಶಾತಿ ಸಂಖ್ಯೆ:** ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು, ಡಾ|| ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಗಳು ಮತ್ತು ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು ಸಾಮಾನ್ಯವಾಗಿ 6ನೇ ತರಗತಿಯ ಪ್ರವೇಶಾತಿ ಸಂಖ್ಯೆಯು ಈ ಕೆಳಗಿನಂತಿರುತ್ತದೆ ಹಾಗೂ ಕೆಲವು ಶಾಲೆಗಳಲ್ಲಿ 2023-24ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯದ ಭಾಷಣದಲ್ಲಿ ಘೋಷಿಸಿರುವಂತೆ ರಾಜ್ಯಾದಾದಂತ್ಯ 50 ಶಾಲೆಗಳಲ್ಲಿ ದಾಖಲಾತಿ ಸಂಖ್ಯೆಯನ್ನು ದ್ವಿಗುಣಗೊಳಿಸಿರುವುದರಿಂದ ಪ್ರವೇಶಾತಿಯನ್ನು ಸರ್ಕಾರದ ಆದೇಶದಂತೆ ಪರಿಷ್ಕರಿಸಲಾಗಿರುತ್ತದೆ.

| ಕ್ರ. ಸಂ | ವಸತಿ ಶಾಲೆಯ ಹೆಸರು | 6ನೇ ತರಗತಿ ಮಂಜೂರಾದ ದಾಖಲಾತಿಸಂಖ್ಯೆ |
|---|---|---|
| 1 | ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು (ರಾಜ್ಯ ಪಠ್ಯ ಕ್ರಮ) | 50/60 |
| 2 | ಡಾ|| ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಗಳು (ಸಿ.ಬಿ.ಎಸ್.ಇ ಪಠ್ಯಕ್ರಮ) | 50/60/80 |
| 3 | ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು (ರಾಜ್ಯ ಪಠ್ಯ ಕ್ರಮ) | 50 |
| 4 | ದಾಖಲಾತಿ ಸಂಖ್ಯೆ ದ್ವಿಗುಣಗೊಂಡ ವಸತಿ ಶಾಲೆಗಳು (ರಾಜ್ಯ ಪಠ್ಯ ಕ್ರಮ) | 110/120 |

**(a) ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು:-**

1. ಪ್ರತಿ ವಸತಿ ಶಾಲೆಗೆ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ :**50**
2. ಮುಸ್ಲಿಂ :**100% (50 ವಿದ್ಯಾರ್ಥಿಗಳು),**
3. ಹೆಣ್ಣು ಮಕ್ಕಳಿಗೆ **50%** ಸ್ಥಾನಗಳನ್ನು ಮೀಸಲಿರಿಸಲಾಗಿದೆ.

..3

Scanned with OKEN Scanner
Scanned with OKEN Scanner

**(b) ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು/ ಡಾ|| ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಗಳು:-**

1. ಪ್ರತಿ ವಸತಿ ಶಾಲೆಗೆ ವಿದ್ಯಾರ್ಥಿಗಳ ಪ್ರವೇಶಸಂಖ್ಯೆ :**50,**
2. ಮೀಸಲಾತಿ ಅಲ್ಪಸಂಖ್ಯಾತರು :**75% (38 ವಿದ್ಯಾರ್ಥಿಗಳು),**
3. ಇತರೆ ವರ್ಗದ ಮೀಸಲಾತಿ: **25% (12 ವಿದ್ಯಾರ್ಥಿಗಳು),**
4. ಹೆಣ್ಣು ಮಕ್ಕಳಿಗೆ **50%** ಸ್ಥಾನಗಳನ್ನು ಮೀಸಲಿರಿಸಲಾಗಿದೆ.

**(c) ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು/ ಡಾ|| ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಗಳು :-**

1. ಪ್ರತಿ ವಸತಿ ಶಾಲೆಗೆ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ :**60,**
2. ಮೀಸಲಾತಿ ಅಲ್ಪಸಂಖ್ಯಾತರು :**75% (45 ವಿದ್ಯಾರ್ಥಿಗಳು),**
3. ಇತರೆ ವರ್ಗದ ಮೀಸಲಾತಿ: **25% (15 ವಿದ್ಯಾರ್ಥಿಗಳು),**
4. ಹೆಣ್ಣು ಮಕ್ಕಳಿಗೆ 50% ಸ್ಥಾನಗಳನ್ನು ಮೀಸಲಿರಿಸಲಾಗಿದೆ.

**(d) ಡಾ|| ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಗಳು:-**

1. ಪ್ರತಿ ವಸತಿ ಶಾಲೆಗೆ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ :**80,**
2. ಪ್ರತಿ ವಿಭಾಗಕ್ಕೆ **40** ವಿದ್ಯಾರ್ಥಿಗಳಂತೆ **02** ವಿಭಾಗಗಳು,
4. ಮೀಸಲಾತಿ ಅಲ್ಪಸಂಖ್ಯಾತರು :**75% (30 ವಿದ್ಯಾರ್ಥಿಗಳು),**
5. ಇತರೆ ವರ್ಗದ ಮೀಸಲಾತಿ: **25% (10 ವಿದ್ಯಾರ್ಥಿಗಳು),**
6. ಹೆಣ್ಣು ಮಕ್ಕಳಿಗೆ **50%** ಸ್ಥಾನಗಳನ್ನು ಮೀಸಲಿರಿಸಲಾಗಿದೆ.

**(e) ದಾಖಲಾತಿ ಸಂಖ್ಯೆ ದ್ವಿಗುಣಗೊಂಡ ವಸತಿ ಶಾಲೆಗಳು:-**

1. ಪ್ರತಿ ವಸತಿ ಶಾಲೆಗೆ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆ :**110/120,**
2. ಪ್ರತಿ ವಿಭಾಗಕ್ಕೆ **50/60** ವಿದ್ಯಾರ್ಥಿಗಳಂತೆ **02** ವಿಭಾಗಗಳು,
4. ಮೀಸಲಾತಿ ಅಲ್ಪಸಂಖ್ಯಾತರು : **75% (38/45 ವಿದ್ಯಾರ್ಥಿಗಳು),**
5. ಇತರೆ ವರ್ಗದ ಮೀಸಲಾತಿ: **25% (12/15 ವಿದ್ಯಾರ್ಥಿಗಳು),**
6. ಹೆಣ್ಣು ಮಕ್ಕಳಿಗೆ **50%** ಸ್ಥಾನಗಳನ್ನು ಮೀಸಲಿರಿಸಲಾಗಿದೆ.

2. **ವರ್ಗವಾರು ಮೀಸಲಾತಿ ಹಂಚಿಕೆ:** ಸರ್ಕಾರದ ಆದೇಶಗಳನ್ವಯ ಮಂಜೂರಾಗಿರುವ ವಿವಿಧ ವಸತಿ ಶಾಲೆಗಳಿಗೆ 6ನೇ ತರಗತಿಗೆ ಆಯ್ಕೆ ಮಾಡಿ ದಾಖಲು ಮಾಡುವಲ್ಲಿ ಪ್ರತಿ ವರ್ಗದ ವಸತಿ ಶಾಲೆಯು ಅನುಸರಿಸಬೇಕಾದ ಮೀಸಲಾತಿ ವಿವರ ಕೆಳಕಂಡಂತೆ ಇರುವುದು. ಸದರಿ ಮೀಸಲಾತಿಯನ್ನು 6ನೇ ತರಗತಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ದಾಖಲಾತಿ ಮಾಡಿಕೊಳ್ಳುವಾಗ ತಪ್ಪದೇ ಅನುಷ್ಠಾನಗೊಳಿಸುವುದು.

| ಅಲ್ಪಸಂಖ್ಯಾತರು (75%) | | | | | | | | | | |
|---|---|---|---|---|---|---|---|---|---|---|
| ದಾಖಲಾತಿ ಸಂಖ್ಯೆ | ಮುಸ್ಲಿಂ (75%) | | ಕ್ರಿಶ್ಚಿಯನ್ (14%) | | ಜೈನ್ (7%) | | ಬೌದ್ಧ (2%) | | ಸಿಖ್/ ಪಾರ್ಸಿ (2%) | |
| ಲಿಂಗ | ಗ | ಹೆ | ಗ | ಹೆ | ಗ | ಹೆ | ಗ | ಹೆ | ಗ | ಹೆ |
| **40** | 11 | 11 | 2 | 2 | 1 | 1 | 0 | 1 | 1 | 0 |
| 50 | 15 | 14 | 2 | 3 | 1 | 1 | 1 | 0 | 0 | 1 |
| 60 | 17 | 17 | 3 | 3 | 1 | 2 | 1 | 0 | 0 | 1 |
| 80 | 22 | 23 | 5 | 4 | 2 | 2 | 1 | 0 | 0 | 1 |
| 110 | 32 | 31 | 5 | 6 | 2 | 3 | 1 | 1 | 1 | 1 |
| 120 | 34 | 34 | 6 | 6 | 3 | 3 | 1 | 1 | 1 | 1 |

..4

Scanned with OKEN Scanner

Scanned with OKEN Scanner

| ದಾಖಲಾತಿ ಸಂಖ್ಯೆ | ಪ.ಜಾ ,ಪ.ಪಂ ಹಾಗೂ ಇತರೆ ಹಿಂದುಳಿದ ವರ್ಗಗಳು, (25%) | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|
| | ಪ್ರವರ್ಗ-1 (4%) | | 2ಎ (15%) | | 3ಎ (4%) | | 3 ಬಿ (5%) | | ಪ.ಜಾಪ್ರ-ಎ (6%) | | ಪ.ಜಾ ಪ್ರ-ಬಿ (6%) | | ಪ.ಜಾ ಪ್ರ-ಸಿ (5%) | | ಪ.ಪಂ (7%) | |
| ಲಿಂಗ | ಗ | ಹೆ | ಗ | ಹೆ | ಗ | ಹೆ | ಗ | ಹೆ | ಗ | ಹೆ | ಗ | ಹೆ | ಗ | ಹೆ | ಗ | ಹೆ |
| **40** | 0 | 1 | 2 | 1 | 1 | 0 | 0 | 1 | 0 | 1 | 1 | 0 | 0 | 1 | 1 | 0 |
| 50 | 1 | 0 | 1 | 2 | 0 | 1 | 1 | 0 | 1 | 1 | 0 | 1 | 1 | 0 | 1 | 1 |
| 60 | 0 | 1 | 2 | 2 | 0 | 1 | 1 | 1 | 1 | 1 | 1 | 1 | 1 | 0 | 1 | 1 |
| 80 | 1 | 0 | 3 | 3 | 1 | 0 | 1 | 1 | 1 | 1 | 1 | 2 | 1 | 1 | 1 | 2 |
| 110 | 1 | 1 | 4 | 4 | 1 | 1 | 1 | 2 | 2 | 1 | 1 | 2 | 1 | 1 | 2 | 2 |
| 120 | 1 | 1 | 4 | 5 | 1 | 1 | 2 | 1 | 1 | 2 | 2 | 2 | 2 | 1 | 2 | 2 |

**3. ವಿಶೇಷ ವರ್ಗಗಳಿಗೆ ಸ್ಥಾನಗಳ ಹಂಚಿಕೆ: -**

| ಕ್ರ. ಸಂ | ಮೀಸಲಾತಿ | ಹಂಚಿಕೆ | 40 ಸಂಖ್ಯೆ | 50 ಸಂಖ್ಯೆ | 60 ಸಂಖ್ಯೆ | 80 ಸಂಖ್ಯೆ |
|---|---|---|---|---|---|---|
| 1 | ದಿವ್ಯಾಂಗ ಮಕ್ಕಳು | 4% | 2 | 2 | 2 | 3 |
| 2 | ಮಾಜಿ ಸೈನಿಕರ ಮಕ್ಕಳು | 4% | 2 | 2 | 2 | 3 |
| 3 | ವಿಶೇಷ ದುರ್ಬಲ ವರ್ಗದ ಮಕ್ಕಳು | 5% | 2 | 3 | 3 | 4 |
| 4 | ಸಫಾಯಿ ಕರ್ಮಾಚಾರಿ ಮಕ್ಕಳು | 5% | 2 | 3 | 3 | 4 |
| 5 | ಅಲೆಮಾರಿ-ಅರೆಅಲೆಮಾರಿ, ಸೂಕ್ಷ್ಮ-ಅತೀ ಸೂಕ್ಷ್ಮ ಅಲೆಮಾರಿ ಸಮುದಾಯಕ್ಕೆ ಸೇರಿದ ಮಕ್ಕಳು | 10% | 4 | 5 | 6 | 8 |
| 6 | ಸ್ಮಶಾನ ಕಾರ್ಮಿಕರ ಮಕ್ಕಳು | 2% | 1 | 1 | 1 | 2 |

a. **ದಿವ್ಯಾಂಗ ಅಭ್ಯರ್ಥಿ:-**ವೈದ್ಯಕೀಯ ಪ್ರಾಧಿಕಾರದಿಂದ ಪ್ರಮಾಣಿಕರಿಸಿದ ಶೇಕಡಾ 40% ಕ್ಕಿಂತ ಕಡಿಮೆ ಇಲ್ಲದಂತೆ ಮಂದದೃಷ್ಟಿ, ವಾಸಿಯಾಗಿರುವ ಕುಷ್ಠರೋಗ, ದುರ್ಬಲ ಶ್ರವಣಶಕ್ತಿ, ಚಲನೆ ಇಲ್ಲದಿರುವುದು ಇನ್ನೂ ಇತ್ಯಾದಿ ದೋಷಗಳಿಂದ ಬಳಲುತ್ತಿರುವ ಮಕ್ಕಳು.

b. **ಮಾಜಿ ಸೈನಿಕರು:-**ಭದ್ರತಾದಳ, ಸೇನಾಪಡೆಗಳಿಂದ ನಿಗಧಿಪಡಿಸಲ್ಪಟ್ಟ ಪ್ರಾಧಿಕಾರಿಯಿಂದ 'ಮಾಜಿಸೈನಿಕ' ಪ್ರಮಾಣ ಪತ್ರವನ್ನು ಪಡೆದಿರುವ ಪೋಷಕರ ಮಕ್ಕಳು ಮಾಜಿ ಸೈನಿಕ ಮೀಸಲಾತಿ ಅಡಿ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

c. **ವಿಶೇಷ ದುರ್ಬಲವರ್ಗ:-**ದೇವದಾಸಿ/ ಹೆಚ್‌ಐವಿ ಪೀಡಿತರು/ತಂದೆ ಅಥವಾ ತಾಯಿ ಇಲ್ಲದ (ಏಕಪೋಷಕರ ಮಕ್ಕಳು) ಅನಾಥ ಮತ್ತು ಬಾಲಕಾರ್ಮಿಕರ ಮಕ್ಕಳು ಹಾಗೂ ಪ್ರವಾಹ ಪೀಡಿತರು ಸಂಬಂಧಪಟ್ಟ ಪ್ರಾಧಿಕಾರದಿಂದ ವಿಶೇಷ ದುರ್ಬಲ ವರ್ಗಕ್ಕೆ ಸೇರಿಸಿದ ದೃಢೀಕೃತ ಪ್ರಮಾಣ ಪತ್ರ ಪಡೆಯಬೇಕು. ಈ ಮೇಲಿನ ದುರ್ಬಲ ವರ್ಗಕ್ಕೆ ದೃಢೀಕರಣ ಪತ್ರ ನೀಡಲು ಸರ್ಕಾರದಿಂದ ಅಧೀಕೃತವಾಗಿ ಯಾವುದೇ ಪ್ರಾಧಿಕಾರವನ್ನು ಘೋಷಿಸಿರದಿದ್ದರೆ, ನಿರ್ದೇಶನಾಲಯದಿಂದ ಪ್ರಕಟಿಸಲಾಗಿರುವ ನಮೂನೆ-2ರಲ್ಲಿ ಕನಿಷ್ಠ ಗ್ರೂಪ್-ಬಿ ದರ್ಜೆಯ ಅಧಿಕಾರಿಯಿಂದ ಧೃಢೀಕರಿಸಲ್ಪಟ್ಟ ಪ್ರಮಾಣ ಪತ್ರ ಹಾಜರು ಪಡಿಸುವುದು.

d. **ಸಫಾಯಿಕರ್ಮಚಾರಿ:-** ಸರ್ಕಾರ ನಿಗಧಿಪಡಿಸಿರುವ ನಿಯಮಾನುಸಾರವಾಗಿ ಸಂಬಂಧಪಟ್ಟ ಪಟ್ಟಣ ಪಂಚಾಯಿತಿ / ನಗರಸಭೆ / ಮಹಾನಗರ ಪಾಲಿಕೆಯ ಮುಖ್ಯ ಅಧಿಕಾರಿ / ಪೌರಾಯುಕ್ತರು /ಆಯುಕ್ತರಿಂದ ನಿಗಧಿತ ನಮೂನೆಯಲ್ಲಿ ಸಫಾಯಿಕರ್ಮಚಾರಿ ಪ್ರಮಾಣ ಪತ್ರವನ್ನುಪಡೆದಿರುವುದು.

..5

Scanned with OKEN Scanner

Scanned with OKEN Scanner

e. **ಅಲೆಮಾರಿ/ಅರೆಅಲೆಮಾರಿ ವಿದ್ಯಾರ್ಥಿಗಳು: -** ಸಮಾಜ ಕಲ್ಯಾಣ ಇಲಾಖೆ/ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗಳಿಂದ ಗುರ್ತಿಸಿರುವ ಪರಿಶಿಷ್ಟಜಾತಿ/ಪರಿಶಿಷ್ಟವರ್ಗ/ ಹಿಂದುಳಿದ/ಅಲ್ಪಸಂಖ್ಯಾತ ಸಮುದಾಯಗಳಲ್ಲಿನ ಸೂಕ್ಷ್ಮ-ಅತೀಸೂಕ್ಷ್ಮ, ಅಲೆಮಾರಿ-ಅರೆಅಲೆಮಾರಿ ಜಾತಿಗೆ ಸೇರಿದ ವಿದ್ಯಾರ್ಥಿಗಳನ್ನು ಪರಿಗಣಿಸುವುದು.

f. **ಸ್ಮಶಾನ ಕಾರ್ಮಿಕರಮಕ್ಕಳು:-** ಸರ್ಕಾರ ನಿಗಧಿಪಡಿಸಿರುವ ನಿಯಮಾನುಸಾರವಾಗಿ ಸಂಬಂಧಪಟ್ಟ ಪಟ್ಟಣ ಪಂಚಾಯಿತಿ / ನಗರಸಭೆ / ಮಹಾನಗರ ಪಾಲಿಕೆಯ ಮುಖ್ಯ ಅಧಿಕಾರಿ / ಪೌರಾಯುಕ್ತರು /ಅಯುಕ್ತರಿಂದ ನಿಗಧಿತ ನಮೂನೆಯಲ್ಲಿ ಸಫಾಯಿಕರ್ಮಚಾರಿ ಪ್ರಮಾಣ ಪತ್ರವನ್ನು ಪಡೆದಿರುವುದು.

ಈ ಆರು ವಿಶೇಷ ದುರ್ಬಲ ವರ್ಗದ ಅಭ್ಯರ್ಥಿಗಳಲ್ಲಿ ಯಾವ ಅಭ್ಯರ್ಥಿ ಹೆಚ್ಚು ಅಂಕಗಳಿಸುತ್ತಾರೆಯೋ ಅವರಿಗೆ ವಿಶೇಷ ಮೀಸಲಾತಿ ಅಡಿ ಪ್ರವೇಶ ಅವಕಾಶ ಕಲ್ಪಿಸುವುದು.

- **ರೈತರ ಆತ್ಮಹತ್ಯೆ ಹಾಗೂ ಕೋವಿಡ್-19ರ ಸಾಂಕ್ರಾಮಿಕ ರೋಗದಿಂದ ಮೃತಪಟ್ಟ ಪೋಷಕರ ಮಕ್ಕಳು:-**ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬದ ಹಾಗೂ ಕೋವಿಡ್-19ರ ಸಾಂಕ್ರಾಮಿಕ ರೋಗದಿಂದ ಮೃತಪಟ್ಟ ಪೋಷಕರ ವಿದ್ಯಾರ್ಥಿಗಳಿಗೆ ರಾಜ್ಯದ ಯಾವುದೇ ವಸತಿ ಶಾಲೆಯಲ್ಲಿ ಖಾಲಿ ಇರುವ ಸ್ಥಾನಗಳಿಗೆ ನೇರವಾಗಿ ಪ್ರವೇಶ ಕಲ್ಪಿಸಬಹುದು. ಪ್ರವೇಶ ಪ್ರಕ್ರಿಯೆ ಮುಕ್ತಾಯಗೊಂಡ ತರುವಾಯ ಯಾವುದೇ ಸಂಧರ್ಭದಲ್ಲಿ ರೈತರ ಆತ್ಮಹತ್ಯೆಯಂತಹ ಹಾಗೂ ಕೋವಿಡ್-19ರ ಸಾಂಕ್ರಾಮಿಕ ರೋಗದಿಂದ ಮೃತ ಪಟ್ಟ ಪೋಷಕರ ದುರಂತ ನಡೆದ ಕುಟುಂಬದ ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶ ಕೋರಿಕೆ ಬಂದರೆ, ಖಾಲಿ ಉಳಿದ ಸ್ಥಾನಕ್ಕೆ ಲಿಂಗ, ವರ್ಗ/ಆರ್ಥಿಕ ಮಿತಿಯನ್ನು ಪರಿಗಣಿಸದೆ ನೇರವಾಗಿ ಪ್ರವೇಶ ಅವಕಾಶ ಕಲ್ಪಿಸವುದು.
- **ಸ್ಥಳೀಯ ಅಭ್ಯರ್ಥಿಗಳು:-**ಒಂದು ತಾಲ್ಲೂಕಿನ ವಸತಿ ಶಾಲೆಗಳಿಗೆ ಅದೇ ತಾಲ್ಲೂಕಿನ ನಿವಾಸಿಯಾದ ವಿದ್ಯಾರ್ಥಿಗಳಿಗೆ ಶೇಕಡಾ 60% ರಷ್ಟು ಸ್ಥಾನವನ್ನು ಹಂಚಿಕೆ ಮಾಡಲಾಗಿರುತ್ತದೆ. 50 ಸಂಖ್ಯೆಯ ವಸತಿ ಶಾಲೆಯಲ್ಲಿ 30 ಸ್ಥಾನಗಳು, 60 ಸಂಖ್ಯೆಯ ವಸತಿ ಶಾಲೆಯಲ್ಲಿ 36 ಸ್ಥಾನಗಳು, 80 ಸಂಖ್ಯೆಯ ವಸತಿ ಶಾಲೆಯಲ್ಲಿ 48 ಸ್ಥಾನಗಳನ್ನು ಸ್ಥಳೀಯ ಅಭ್ಯರ್ಥಿಗಳಿಗೆ ಮೀಸಲಿಡುವುದು. ಅಭ್ಯರ್ಥಿಗಳು ದೊರೆಯದಿದ್ದಲ್ಲಿ ಕೌನ್ಸಿಲಿಂಗ್ ಮೂಲಕ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವುದು. ಸ್ಥಳೀಯ ಅಭ್ಯರ್ಥಿ ಎಂದು ರುಜುವಾತು ಪಡಿಸಲು ಆಧಾರ್ಕಾರ್ಡ್, ಜಾತಿ ಪ್ರಮಾಣ ಪತ್ರ, ವಾಸಸ್ಥಾನ ಪ್ರಮಾಣ ಪತ್ರ ಅಥವಾ ಪಡಿತರ ಚೀಟಿ ಹೊಂದಿರಬೇಕು.

**ವಿ.ಸೂ:-** ವಿಶೇಷ ವರ್ಗಗಳ ಮೀಸಲಾತಿಯನ್ನು ನೀಡುವಾಗ **ಶೇ.75 ರಷ್ಟು** ಅಲ್ಪಸಂಖ್ಯಾತರ ಸಮುದಾಯಗಳ ವಿದ್ಯಾರ್ಥಿಗಳು ಮತ್ತು ಉಳಿದ **ಶೇ.25 ರಷ್ಟು** ಸೀಟುಗಳನ್ನು ಪ.ಜಾತಿ, ಪ.ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ನಿಗಧಿಪಡಿಸಿರುವ ಮೀಸಲಾತಿಯನ್ನು ಮೀರದಂತೆ ಕಡ್ಡಾಯವಾಗಿ ಖಾತ್ರಿ ಪಡಿಸಿಕೊಳ್ಳುವುದು.

**4. ಜಾತಿ ಮತ್ತು ಆದಾಯ ಪ್ರಮಾಣ ಪತ್ರ : -**

| ವರ್ಗ | ಜಾತಿಪ್ರಮಾಣಪತ್ರ | ಆದಾಯಪ್ರಮಾಣಪತ್ರ |
|---|---|---|
| ಅಲ್ಪಸಂಖ್ಯಾತ ಸಮುದಾಯದ ಅಭ್ಯರ್ಥಿಗಳು | ಅಲ್ಪಸಂಖ್ಯಾತ ಸಮುದಾಯದ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಚಾಲ್ತಿಯಲ್ಲಿರುವ ಜಾತಿ/ವರ್ಗ ಪ್ರಮಾಣ ಪತ್ರವನ್ನು ನಿಗದಿತ ನಮೂನೆಯಲ್ಲಿ ಹೊಂದಿರುವುದು | ಅಲ್ಪಸಂಖ್ಯಾತ ಸಮುದಾಯದ 2ಎ, 2ಬಿ, 3ಬಿ ಹಾಗೂ ಪ್ರ. ವರ್ಗ-1ಕ್ಕೆ ಸೇರಿದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯವು ರೂ.2,50,000/- ಮಿತಿಯೊಳಗಿರಬೇಕು |



Scanned with OKEN Scanner
Scanned with OKEN Scanner

| | | |
|---|---|---|
| ಹಿಂದುಳಿದ ವರ್ಗಗಳ ಅಭ್ಯರ್ಥಿಗಳು | ಹಿಂದುಳಿದ ವರ್ಗಗಳ ಅಭ್ಯರ್ಥಿಗಳುಸಕ್ಷಮ ಪ್ರಾಧಿಕಾರದಿಂದ ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರವನ್ನುನಿಗಧಿತ ನಮೂನೆಯಲ್ಲಿ ಹೊಂದಿರುವುದು. | ಹಿಂದುಳಿದ ವರ್ಗಗಳ 2ಎ,2ಬಿ,3ಎ ಮತ್ತು 3ಬಿ ಹಾಗೂ ಪ್ರ.ವರ್ಗ-1ಕ್ಕೆ ಸೇರಿದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯವು ರೂ.2,50,000/- ಮಿತಿಯೊಳಗಿರಬೇಕು |
| ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗ | ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗಗಳ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರದಿಂದ ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರವನ್ನು ನಿಗಧಿತ ನಮೂನೆಯಲ್ಲಿ ಹೊಂದಿರುವುದು. | ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳು ಕುಟುಂಬದ ವಾರ್ಷಿಕ ಆದಾಯ ರೂ.2,50,000/- ಮಿತಿಯೊಳಗಿರತಕ್ಕದ್ದು. |

**4. ಪ್ರವೇಶ ಪ್ರಕ್ರಿಯೆ:-** ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಹಾಗೂ ಡಾ|| ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಗಳಲ್ಲಿ 6ನೇ ತರಗತಿಯ ಪ್ರವೇಶ ಪ್ರಕ್ರಿಯೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ/ ಇತರೆ ಪರೀಕ್ಷಾ ಏಜೆನ್ಸಿ / ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ ನಡೆಸುತಿದ್ದು, ವಿದ್ಯಾರ್ಥಿಗಳು ಆನ್ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸುವುದು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಜಿಲ್ಲಾ ಅಧಿಕಾರಿಗಳು, ಪ್ರಾಂಶುಪಾಲರು, ಮತ್ತು ತಾಲ್ಲೂಕು ಅಲ್ಪಸಂಖ್ಯಾತರ ವಿಸ್ತರಣಾಧಿಕಾರಿಗಳು, ವಸತಿ ಶಾಲೆಯ ಶಿಕ್ಷಕರು, ಮಾಹಿತಿ ಕೇಂದ್ರದ ಸಿಬ್ಬಂದಿಗಳು ಮತ್ತು ಇತರ ಸಿಬ್ಬಂದಿಗಳ ಮೂಲಕ ಎಲ್ಲಾ ಸ್ಥಳೀಯ ಸಂಸ್ಥೆಗಳು ಹಾಗೂ ಇತರೆ ಅಂಗ ಸಂಸ್ಥೆಗಳ ಸಹಯೋಗದೊಂದಿಗೆ ಪ್ರತಿ ಗ್ರಾಮ ಮತ್ತು ಪಟ್ಟಣಗಳಿಗೆ ಭೇಟಿ ನೀಡಿ ಮನೆ-ಮನೆ ಪ್ರಚಾರ ಕಾರ್ಯಗಳನ್ನು ಕೈಗೊಂಡು ಅಲ್ಪಸಂಖ್ಯಾತರ ವಸತಿ ಶಾಲೆಗಳಿಗೆ ಮಕ್ಕಳನ್ನು ದಾಖಲಿಸುವಂತೆ ಪ್ರಚಾರ ಮಾಡುವುದು ಹಾಗೂ ತಮ್ಮ ವ್ಯಾಪ್ತಿಯ ಎಲ್ಲಾ ವಸತಿ ಶಾಲೆಗಳಲ್ಲಿ ಶೇ.100% ದಾಖಲಾತಿಯನ್ನು ಪಡೆಯಲು ಜಿಲ್ಲಾ ಅಧಿಕಾರಿಗಳು, ಪ್ರಾಂಶುಪಾಲರು, ಮತ್ತು ತಾಲ್ಲೂಕು ಅಲ್ಪಸಂಖ್ಯಾತರ ವಿಸ್ತರಣಾಧಿಕಾರಿಗಳು, ಅಗತ್ಯ ಕ್ರಮವಹಿಸುವುದು.

a. **ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಇರಬೇಕಾದ ಅರ್ಹತೆಗಳು:-**

1. ಅಭ್ಯರ್ಥಿಯು ಸರ್ಕಾರದಿಂದ ಅನುಮೋದಿಸಲ್ಪಟ್ಟ ಶಾಲೆಯಿಂದ 5ನೇ ತರಗತಿಯಲ್ಲಿ ಓದುತ್ತಿರಬೇಕು/ ಉತ್ತೀರ್ಣರಾಗಿರಬೇಕು. ದಾಖಲಾತಿ ಸಂದರ್ಭದಲ್ಲಿ ದಾಖಲೆಗಳ ಪರಿಶೀಲನೆಯ ಸಂದರ್ಭದಲ್ಲಿಅಂಕಪಟ್ಟಿಯನ್ನು ಹೊಂದಿರಬೇಕು.
2. ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
3. 09 ರಿಂದ 13 ವಯೋಮಾನದವರಾಗಿರಬೇಕು.

b. **ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ವಿಧಾನ:-**

1. ನಿರ್ದೇಶನಾಲಯದಿಂದ ಕಾಲಕಾಲಕ್ಕೆ ಹೊರಡಿಸಲಾಗುವ ಸೂಚನೆಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳು ಆನ್‌ಲೈನಲ್ಲಿ ಅರ್ಜಿ ಸಲ್ಲಿಸುವುದು ಅಥವಾ ತಮ್ಮ ಸಮೀಪದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಸತಿ ಶಾಲೆಗಳಲ್ಲಿಅಥವಾ ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವುದು.
2. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರ ಕಛೇರಿ ಮೂಲಕ ಮಾಹಿತಿ ಪಡೆಯುವುದು.

..7

Scanned with OKEN Scanner
Scanned with OKEN Scanner

**5. ಪ್ರವೇಶ ಪರೀಕ್ಷೆ ವಿಧಾನ :**

1. ಪ್ರವೇಶ ಬಯಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಪ್ರವೇಶ ಪರೀಕ್ಷೆಯನ್ನು ಬರೆಯಬೇಕು.
2. ಕರ್ನಾಟಕ ಪರೀಕ್ಷಾ ಪ್ರಾಧಿಕಾರ / ಅಲ್ಪಸಂಖ್ಯಾತರ ನಿರ್ದೇಶನಾಲಯ/ ಇತರೆ ಯಾವುದೇ ಸರ್ಕಾರಿ ಏಜೆನ್ಸಿ ವತಿಯಿಂದ ರಾಜ್ಯಮಟ್ಟದ ಪ್ರವೇಶ ಪರೀಕ್ಷೆಯನ್ನು ನಡೆಸಲಾಗುವುದು.
3. ವಸತಿ ಶಾಲೆಯ ಪ್ರವೇಶ ಪರೀಕ್ಷೆಯಲ್ಲಿಗಳಿಸಿದ ಅಂಕಗಳು ಮತ್ತು ಮೀಸಲಾತಿ ಹಾಗೂ ಲಭ್ಯವಿರುವ ಸೀಟುಗಳ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು.
4. ಪ್ರವೇಶ ಪರೀಕ್ಷೆಯ ಪಠ್ಯಕ್ರಮ, ಪರೀಕ್ಷಾ ವಿಧಾನ, ಪರೀಕ್ಷಾ ಕ್ರಮ ಮುಂತಾದ ಪ್ರವೇಶ ಪರೀಕ್ಷಾ ಮಾರ್ಗಸೂಚಿಗಳನ್ನು ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ರವರು ಪ್ರತ್ಯೇಕವಾಗಿ ಹೊರಡಿಸತಕ್ಕದ್ದು.

**6. ಖಾಲಿ ಉಳಿದ ಸ್ಥಾನಗಳ ಭರ್ತಿ:-**

1. ಬಾಲಕ ಸ್ಥಾನ ಖಾಲಿ ಉಳಿದರೆ, ಅದೇ ವರ್ಗದ ಬಾಲಕಿಗೆ ಅವಕಾಶ ಕಲ್ಪಿಸುವುದು.
2. ಬಾಲಕಿ ಸ್ಥಾನ ಖಾಲಿ ಉಳಿದರೆ, ಅದೇ ವರ್ಗದ ಬಾಲಕರಿಗೆ ಅವಕಾಶ ಕಲ್ಪಿಸುವುದು.
3. ಸರ್ಕಾರದ ಆದೇಶದ ಮೀಸಲಾತಿಯನ್ವಯ ಶೇ.75 ರಂತೆ ಅಲ್ಪಸಂಖ್ಯಾತರ ಸಮುದಾಯಗಳಿಗೆ ಮತ್ತು ಶೇ.25 ರಂತೆ ಪ.ಜಾತಿ, ಪ.ಪಂಗಡ ಮತ್ತು ಇತರೆ ಹಿಂದುಳಿದ ವರ್ಗಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಸುವುದು.
4. ಅಲ್ಪಸಂಖ್ಯಾತರ ಸಮುದಾಯದ ವಿದ್ಯಾರ್ಥಿಗಳ ಸ್ಥಾನ ಖಾಲಿ ಉಳಿದರೆ, ಅಲ್ಪಸಂಖ್ಯಾತರ ಸಮುದಾಯದ ಇತರೆ ವರ್ಗಗಳಿಗೆ ಅವಕಾಶ ಕಲ್ಪಿಸುವುದು.

**7. ವಸತಿ ಶಾಲಾ ಸಿಬ್ಬಂದಿ ಮತ್ತು ಸರ್ಕಾರಿ ನೌಕರ ಮಕ್ಕಳಿಗೆ ಅವಕಾಶ:-**ವಸತಿ ಶಾಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಖಾಯಂ/ ಹೊರಗುತ್ತಿಗೆ ಸಿಬ್ಬಂದಿಗಳ ಮಕ್ಕಳಿಗೆ ವಾರ್ಷಿಕ ಆದಾಯ ಮಿತಿ ಇಲ್ಲದೆ ಪ್ರವೇಶ ಪರೀಕ್ಷೆ ಬರೆಯಲು ಅವಕಾಶ ನೀಡಿ, ಪ್ರವೇಶವನ್ನು ಕಲ್ಪಿಸುವುದು ಹಾಗೂ ಇತರ ಕೇಂದ್ರ/ರಾಜ್ಯ ಸರ್ಕಾರಿ ನೌಕರರ ಮಕ್ಕಳು ಆದಾಯ ಮಿತಿಯೊಳಗಿದ್ದಲ್ಲಿ ಅರ್ಜಿ ಸಲ್ಲಿಸಿ ಪ್ರವೇಶ ಪಡೆಯಲು ಅರ್ಹರಾಗಿರುತ್ತಾರೆ.

**8. ಪ್ರವೇಶ ಪ್ರಕ್ರಿಯೆಯ ವಾರ್ಷಿಕ ಕಾರ್ಯಕ್ರಮಗಳ ತಾತ್ಕಾಲಿಕ ವೇಳಾಪಟ್ಟಿ**

| ಕ್ರ. ಸಂ | ವಿವರ | ವೇಳಾಪಟ್ಟಿ |
|---|---|---|
| 1 | ಪ್ರವೇಶ ಪ್ರಕ್ರಿಯೆಯ ಅಧಿಸೂಚನೆ ಪ್ರಕಟಣೆ | ಆಯಾ ಶೈಕ್ಷಣಿಕ ಸಾಲಿನ ಅಕ್ಟೋಬರ್ ಮತ್ತು ನವಂಬರ್ ಮಾಹೆ |
| 2 | ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಸಲ್ಲಿಸುವ ಪ್ರಾರಂಭಿಕ ದಿನಾಂಕ | |
| 3 | ಅರ್ಜಿ ಸಲ್ಲಿಸಲು ನಿಗಧಿಪಡಿಸುವ ಕಡೆಯ ದಿನಾಂಕ | ಆಯಾ ಶೈಕ್ಷಣಿಕ ಸಾಲಿನ ಡಿಸೆಂಬರ್ ಮಾಹೆ |
| 4 | ಸಂಬಂಧಪಟ್ಟ ಶಾಲೆಗಳ ಪ್ರಾಂಶುಪಾಲರು ಅರ್ಜಿಗಳನ್ನು ಪರಿಶೀಲಿಸುವ ಅಂತಿಮ ದಿನಾಂಕ | ಅರ್ಜಿ ಸಲ್ಲಿಸುವ ಕಡೆಯ ದಿನಾಂಕದಿಂದ 10 ದಿನಗಳಲ್ಲಿ |
| 5 | ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳು, ಅಸಂಕಇ, ಇವರು ಅರ್ಜಿಗಳನ್ನು ಅನುಮೋದಿಸುವ ಅಂತಿಮ ದಿನಾಂಕ | ಅರ್ಜಿ ಸಲ್ಲಿಸುವ ಕಡೆಯ ದಿನಾಂಕದಿಂದ 10 ದಿನಗಳಲ್ಲಿ |

..8

Saeed

Scanned with OKEN Scanner

Scanned with OKEN Scanner

| | | |
|---|---|---|
| 6 | ಲಿಖಿತ ಪರೀಕ್ಷೆ ನಡೆಸುವ ಸಂಭವನೀಯ ದಿನಾಂಕ (ಭಾನುವಾರ) | ಆಯಾ ಶೈಕ್ಷಣಿಕ ಸಾಲಿನ ಜನವರಿ/ಫೆಬ್ರವರಿ ಮಾಹೆ |
| 7 | ಮಾದರಿ ಉತ್ತರಗಳ ಪ್ರಕಟಣೆ ಮತ್ತು ಆಕ್ಷೇಪಣೆಗಳನ್ನು ಸಲ್ಲಿಸುವ ಅವಧಿ | ಪರೀಕ್ಷೆ ನಡೆದ ದಿನಾಂಕದಿಂದ 07 ದಿನಗಳಲ್ಲಿ |
| 8 | ಫಲಿತಾಂಶ ಪ್ರಕಟಣೆ | ಆಯಾ ಶೈಕ್ಷಣಿಕ ಸಾಲಿನ ಫೆಬ್ರವರಿ/ಮಾರ್ಚ್ ಮಾಹೆ |
| 9 | ಜಿಲ್ಲಾವಾರು ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ ಮತ್ತು ಆಕ್ಷೇಪಣೆ ಸಲ್ಲಿಸುವ ಅವಧಿ | ಆಯಾ ಶೈಕ್ಷಣಿಕ ಸಾಲಿನ ಮಾರ್ಚ್ ಮಾಹೆ |
| 10 | ಮೊದಲ ಸುತ್ತಿನ ಆಯ್ಕೆ ಪಟ್ಟಿ ಪ್ರಕಟಿಸುವ ದಿನಾಂಕ | ಆಯಾ ಶೈಕ್ಷಣಿಕ ಸಾಲಿನ ಏಪ್ರಿಲ್ ಮಾಹೆ |
| 11 | ಎರಡನೇ ಸುತ್ತಿನ ಆಯ್ಕೆ ಪಟ್ಟಿ ಪ್ರಕಟಿಸುವ ದಿನಾಂಕ | ಆಯಾ ಶೈಕ್ಷಣಿಕ ಸಾಲಿನ ಏಪ್ರಿಲ್ ಮಾಹೆ |
| 12 | ಅಗತ್ಯವಿದ್ದಲ್ಲಿ ಮೂರನೇ ಸುತ್ತಿನ ಆಯ್ಕೆ ಪಟ್ಟಿ ಪ್ರಕಟಿಸುವ ದಿನಾಂಕ | ಆಯಾ ಶೈಕ್ಷಣಿಕ ಸಾಲಿನ ಏಪ್ರಿಲ್ ಮಾಹೆ |
| 13 | ಅಗತ್ಯ ವಿದ್ದಲ್ಲಿ ನಾಲ್ಕನೇ ಸುತ್ತಿನ ಆಯ್ಕೆಪಟ್ಟಿ ಪ್ರಕಟಿಸುವ ದಿನಾಂಕ | ಆಯಾ ಶೈಕ್ಷಣಿಕ ಸಾಲಿನ ಮೇ ಮಾಹೆ |
| 14 | ವಿದ್ಯಾರ್ಥಿಗಳು ಶಾಲೆಗೆ ದಾಖಲಾಗುವ ಅಂತಿಮ ದಿನಾಂಕ | ಆಯಾ ಶೈಕ್ಷಣಿಕ ಸಾಲಿನ ಮೇ ಮಾಹೆಯ ದಿನಾಂಕ 20 ರೊಳಗಾಗಿ |
| 15 | ದಾಖಲಾತಿ ಪ್ರಕ್ರಿಯೆ ಕೊನೆಗೊಳಿಸುವ ದಿನಾಂಕ | ಆಯಾ ಶೈಕ್ಷಣಿಕ ಸಾಲಿನ ಜೂನ್ ಮಾಹೆಯ ದಿನಾಂಕ 10 ರೊಳಗಾಗಿ |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

31/12/2025

(ಎಸ್. ಎಜಾಸ್ ಪಾಷ)
ಸರ್ಕಾರದ ಅಧೀನ ಕಾರ್ಯದರ್ಶಿ,
ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ

ಇವರಿಗೆ:

1. ಮಹಾಲೇಖಪಾಲರು (ಅ ಮತ್ತು ಇ), ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ವಸಂತನಗರ, ಬೆಂಗಳೂರು.
3. ಎಲ್ಲಾ ಜಿಲ್ಲೆಯ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ. (ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ ಇವರ ಮುಖಾಂತರ)
4. ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ, ವಿಕಾಸಸೌಧ, ಬೆಂಗಳೂರು.
6. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

Scanned with OKEN Scanner
Scanned with OKEN Scanner